| |
|---|
| **Deposition Sheets (RP.No.57) Form No.4** |

**IN THE COURT OF PRL. CIVIL JUDGE & J.M.F.C., KARKALA.**

**Criminal Case No.1564/2023**

ಪಿಡ್ಬ್ಲೂಃ 6 ಸಿಡ್ಲ್ಯೂಃ 7

ಸಾಕ್ಷಿದಾರನ ಹೆಸರು : ಅನಂತಕೃಷ್ಣ ಶೆಟ್ಟಿ
ತಂದೆಯ ಹೆಸರು : ಅಪ್ಪು ಮೇಸ್ತ್ರಿ
ಪ್ರಾಯ : 52 ವರ್ಷ
ಉದ್ಯೋಗ : ಪಿಡಬ್ಲ್ಯೂಡಿ ಕಾಂಟ್ರಕ್ಟರ್
ವಾಸ : ಕಾರ್ಕಳ

ದಿನಾಂಕ 08.05.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ಈ ದಿನ ನ್ಯಾಯಾಲಯದ ಮುಂದೆ ಇರುವ ಅರೋಪಿಯನ್ನು ನೋಡಿ ಗುರುತಿಸಿರುತ್ತೇನೆ.

ಚಾಸಾ-1 ರಿಂದ 4 ರವರ ಪರಿಚಯ ಇದೆ.

ಮಳೆಗಾಲದ ಸಮಯದಲ್ಲಿ ಕಾರ್ಕಳ ಪುರಸಭೆಗೆ ಸೇರಿದ ಮುಂಡ್ಲಿ ಡ್ಯಾಮ್ ನಲ್ಲಿ ನೀರನ್ನು ತಡೆದು ನಿಲ್ಲಿಸಲು ಜಾಕ್ ವೆಲ್ ಗೆ ನೀರು ಒದಗಿಸುವ ಗೇಟ್ ಗಳನ್ನು ಅಳವಡಿಸಿದ್ದು, ಮಳೆಗಾಲದಲ್ಲಿ ಬೆಳೆ, ಮನೆ ಹಾಗೂ ಡ್ಯಾಮ್ ಗೆ ಕೂಡಾ ಹಾನಿಯಾಗುವ ಸಂಭವ ಇರುವುದರಿಂದ ಈಗಾಗಲೇ ಅಳವಡಿಸಿದ ಗೇಟ್ ಗಳನ್ನು ತೆರವುಗೊಳಿಸಿ ಮತ್ತು ಪುನಃ ಅಳವಡಿಸುವಂತೆ ಚಾಸಾ-1 ರವರು ತಿಳಿಸಿದ ಮೇರೆಗೆ ನಾನು ಗೇಟ್ ನ್ನು ತೆಗೆದು ಮುಂಡ್ಲಿ ಡ್ಯಾಮ್ ಗೆ ದಾಸ್ತಾನು ಇರಿಸಿರುತ್ತೇನೆ.

ಅಕ್ಟೋಬರ್ 2021 ರಲ್ಲಿ ದಾಸ್ತಾನು ಇರಿಸಿದ್ದ 110 ಗೇಟ್ ಗಳು ಕಳುವಾಗಿರುವ ಬಗ್ಗೆ ಚಾಸಾ-1 ರವರು ನನಗೆ ತಿಳಿಸಿರುತ್ತಾರೆ. ಸದ್ರಿ ದಾಸ್ತಾನು ಇರಿಸಿದ ಫೋಟೋಗಳು ನನ್ನ ಬಳಿ ಇದ್ದವು. ಅದನ್ನು ನಾನು ಚಾಸಾ-1 ರವರಿಗೆ ನೀಡಿರುತ್ತೇನೆ. ನಾನು ನಿಪಿ-7 , 8 , 9, 20, 20(ಎ) ರಿಂದ 20(ಎಫ್) ಫೋಟೋಗಳನ್ನು ನೀಡಿರುತ್ತೇನೆ. ಸದ್ರಿ ಗೇಟ್ ಗಳನ್ನು ಯಾರು ಕಳ್ಳತನ ಮಾಡಿರುತ್ತಾರೆ ಎಂದು ಚಾಸಾ-1 ರವರು ನನಗೆ ತಿಳಿಸಿರುತ್ತಾರೆ.

ಪೊಲೀಸರು ನನ್ನನ್ನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಿಸಿ ಹೇಳಿಕೆಯನ್ನು ಪಡೆದಿರುತ್ತಾರೆ.

<u>ಪಾಟೀ ಸವಾಲು :</u> ಆರೋಪಿ ಪರ : ಶ್ರೀ ಪಿ ಎ ಎಸ್ ವಕೀಲರಿಂದಃ

ನನ್ನ ಸಹೋದರ ಗೋಪಾಲ ಕೃಷ್ಣ ಎಂಬುವವರು ಕಾರ್ಕಳ ಪುರಸಭೆಯಲ್ಲಿ ಕಂದಾಯ ಅಧಿಕಾರಿ ಆಗಿ ನಂತರ ಭಡ್ತಿ ಹೊಂದಿ ಮುಖ್ಯಾಧಿಕಾರಿಯಾಗಿರುತ್ತಾರೆ ಎಂದರೆ ಸರಿ. ಹೀಗಿರುವಾಗ ನನಗೆ ಪುರಸಭೆಯಲ್ಲಿ ಹಲವಾರ ಪರಿಚಯ ಇರುತ್ತದೆ ಎಂದರೆ ನಾನು 30 ವರ್ಷದಿಂದ ಕಾಂಟ್ರಕ್ಟರ್ ಆಗಿ ಕೆಲಸ ಮಾಡುತ್ತಿದ್ದೇನೆ ಹಾಗಾಗಿ ಪರಿಚಯ ಇರುತ್ತಾರೆ.

ಸಮಾನ್ಯವಾಗಿ ಪುರಸಭೆಯಲ್ಲಿ ಯಾವುದೆ ಕೆಲಸ ಮಾಡಬೇಕಾದರೆ ಮೊದಲು ಟೆಂಡರ್ ಆಗಿ ನಂತರವೇ ಕೆಲಸ ನಿರ್ವಹಿಸಲಾಗುತ್ತದೆ. ಈ ಘಟನೆಗೆ ಸಂಬಂಧಿಸಿದಂತೆ ಟೆಂಡರ್ ಹಾಗೂ ಕಾರ್ಯದೇಶ ನನ್ನಲ್ಲಿ ಇದೆ. ಕಾರ್ಯದೇಶದ ನಂಬರ್ ನನಗೆ ನೆನಪಿಲ್ಲ. ಸದ್ರಿ ಕೆಲಸಕ್ಕೆ ಸಂಬಂಧಿಸಿದಂತೆ ಟೆಂಡರ್ ಹಾಗೂ ಕಾರ್ಯದೇಶ ಆಗಿದೆ ಎಂದು ಹೇಳಿಕೆ ನೀಡಿರುವುದಿಲ್ಲ. ಸದ್ರಿ ಕೆಲಸಕ್ಕೆ ಸರಿಸುಮಾರು ಒಂದು ಲಕ್ಷ ವೆಚ್ಚ ಆಗಿರುತ್ತದೆ. ಟೆಂಡರ್ ಹಾಗೂ ಕಾರ್ಯದೇಶ ಪಡೆದುಕೊಂಡು ಕೆಲಸ ಮಾಡಿದ್ದೆ ಎಂದು ಹೇಳಲು ನನ್ನಲ್ಲಿ ದಾಖಲೆ ಇರುತ್ತದೆ.

ಅದೇ ರೀತಿ ಸದ್ರಿ ಕೆಲಸಕ್ಕೆ ಪುರಸಭೆಯಿಂದ ನನ್ನ ಖಾತೆಗೆ ಹಣ ವರ್ಗಾವಣೆ ಆಗಿರುತ್ತದೆ. ಸದ್ರಿ ಜಮಾ ಆದ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡುವ ಸಮಯದಲ್ಲಿ ದಾಖಲೆಯನ್ನು ನೀಡಿರುತ್ತೇನೆ. ನಾನು ಹೇಳಿಕೆ ಸಮಯದಲ್ಲಿ ಸದ್ರಿ ದಾಖಲೆಯನ್ನು ನೀಡಿರುತ್ತೇನೆ ಎಂದು ನನ್ನ ಹೇಳಿಕೆಯಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ.

ನಾನು ಒಟ್ಟು 110 ಗೇಟ್ ಗಳನ್ನು ತೆಗೆದಿರುತ್ತೇನೆ. ಪುರಸಭೆಯವರು ನನಗೆ ಸದ್ರಿ 110 ಗೇಟ್ ಗಳನ್ನು ಕಳ್ಳತನವಾಗಿದೆ ಎಂದು ಹೇಳಿರುತ್ತಾರೆ. ಆ ಸಮಯದಲ್ಲಿ ಬೇರೆ ಎಷ್ಟು ಗೇಟ್ ಗಳು ಸ್ಟಾಕ್ ಇದ್ದವು ಎಂದು ನನಗೆ ಗೊತ್ತಿಲ್ಲ. ನಿಪಿ-7 , 8 , 9, 20, 20(ಎ) ರಿಂದ 20(ಎಫ್) ಫೋಟೋಗಳಲ್ಲಿ ನಾನು ಇಲ್ಲ. ಸದ್ರಿ ಫೋಟೋವನ್ನು ಅಲ್ಲಿ ಕೆಲಸಕ್ಕೆ ನೇಮಿಸಲ್ಪಟ್ಟಿದ್ದ ವ್ಯಕ್ತಿ ತೆಗೆದಿರುತ್ತಾರೆ. ಅದನ್ನು ನನ್ನ ಕೆಲಸದವರಾದ ವಸಂತ್ ಎಂಬುವವರು ತೆಗೆದಿರುತ್ತಾರೆ.

ನನಗೆ ಕಾರ್ಯದೇಶದಲ್ಲಿ ಸದ್ರಿ ಗೇಟ್ ಗಳನ್ನು ತೆಗೆಯುವಾಗ, ಹಸ್ತಾಂತರಿಸುವಾಗ ಮತ್ತು ದಾಸ್ತಾನು ಇರಿಸುವಾಗ ಫೋಟೋಗಳನ್ನು ತೆಗೆಯಬೇಕು ಎಂದು ಕಡ್ಡಾಯವಾಗಿರುತ್ತದೆ. ನಾನು ಪುರಸಭೆಗೆ ಸದ್ರಿ ಫಟೋಗಳನ್ನು ಮತ್ತು ಅದಕ್ಕೆ ಸಂಬಂಧಿಸಿದ ಪೆನ್ ಡ್ರೈವ್ ಮತ್ತು ಮೂಲ ಫೋಟೋಗಳನ್ನು ನೀಡಿರುತ್ತೇನೆ. ನಾನು ಈ ವಿಚಾರವನ್ನು ಪೊಲೀಸರಿಗೆ ನನ್ನ ಹೇಳಿಕೆ ಸಮಯದಲ್ಲಿ ತಿಳಿಸಿರುತ್ತೇನೆ. ನಾನು ಸ್ವತಃ ಸದ್ರಿ ಪೊಟೋಗಳನ್ನು ತೆಗೆದಿರುವುದಿಲ್ಲ. ನನ್ನ ಹೇಳಿಕೆಯಲ್ಲಿ ವಸಂತರವರಿಂದ ಫೊಟೋವನ್ನು ತೆಗೆಸಿದ್ದೇನೆ ಎಂದು ನಮೂದಿಸಿರುವುದಿಲ್ಲ.

ಮುಂಡ್ಲಿ ಆಣೆಕಟ್ಟಿನಲ್ಲಿ ಜಿ ವಿ ಆರ್ ಎಂಬ ಪವರ್ ಪ್ಲಾಂಟ್ ಇದೆ ಎಂದರೆ ಸರಿ. ಸದ್ರಿ ಪವರ್ ಪ್ಲಾಂಟ್ 2014 ರಲ್ಲಿ ಪ್ರಾರಂಭವಾಗಿರುತ್ತದೆ. ಸದ್ರಿ ಪವರ್ ಪ್ಲಾಂಟ್ ಗೆ ಮುಂಡ್ಲಿ ಆಣೆಕಟ್ಟಿನಿಂದ ನೀರು ಸರಬರಾಜು ಆಗುತ್ತದೆ. ಸದ್ರಿ ಪವರ್ ಪ್ಲಾಂಟ್ ನ ಮುಖ್ಯ ಗೇಟಿಗೆ ವಿದ್ಯುತ್ ಚಾಲಿತ ಗೇಟ್ ಗಳನ್ನು ಅಳವಡಿಸಲಾಗಿದೆ.

ಗೇಟ್ ಗಳನ್ನು ಅಳವಡಿಸುವುದು ಮತ್ತು ತೆಗೆಯುವ ಕೆಲಸವನ್ನು ಪವರ್ ಪ್ಲಾಂಟ್ ಗೆ ನೀಡಲಾಗಿದೆ ಎಂದರೆ ಇರಬಹುದು. ಆ ಕಾರಣ ಮಳೆಗಾಲದಲ್ಲಿ ಗೇಟನ್ನು ತೆಗೆಯುವುದು ಮತ್ತು ಬೇಸಿಗೆ ಕಾಲದಲ್ಲಿ ಗೇಟನ್ನು ಅಳವಡಿಸುವ ಕೆಲಸ ಮಾನವ ಸಹಾಯದಿಂದ ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಒಂದೊಂದು ಕಬ್ಬಿಣದ ಗೇಟ್ ಸುಮಾರು 150 ಕೆ.ಜಿ ತೂಕ ಇರುತ್ತದೆ. ಅದನ್ನು ಸ್ಥಳಾಂತರಿಸಲು ಕಡಿಮೆ ಪಕ್ಷ 4 ಜನ ಬೇಕಾಗಿರುತ್ತದೆ. ಅದನ್ನು ಒಬ್ಬರಿಂದ ಸ್ಥಳಾಂತರಿಸಲು ಆಗುವುದಿಲ್ಲ.

ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಕಾರ್ಯದೇಶ ಮತ್ತು ಗೇಟನ್ನು ನಾನು ತೆಗೆದಿರುವುದಿಲ್ಲ ಮತ್ತು ದಾಸ್ತಾನು ಇಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ಪ್ರಕಾರ

ನನಗೆ ಪುಸಭೆಯಿಂದ ಹಣ ಪಾವತಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ ಕೆಲಸ ನಿರ್ವಹಿಸದ ಕಾರಣ ಯಾವುದೇ ಕಾರ್ಯದೇಶ ಇರುವುದಿಲ್ಲ ಮತ್ತು ಸದ್ರಿ ದಾಖಲೆಗಳನ್ನು ಪೊಲೀಸರಿಗೆ ಹಸ್ತಾಂತರಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಸಹೋದರ ಪುರಸಭೆಯಲ್ಲಿ ಕೆಲಸ ಮಾಡುತ್ತಿರುವ ಕಾರಣ ಅವರಿಗೆ ಸಹಾಯ ಮಾಡಲು ಈ ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪವರ್ ಪ್ಲಾಂಟ್ ನವರು ಸಿಸಿ ಕ್ಯಾಮೇರಾವನ್ನು ಅಳವಡಿಸಿರುತ್ತಾರೆ ಎಂದರೆ ಸರಿ. ಸಿಸಿ ಕ್ಯಾಮೇರಾ ಮುಖೇನ ಅಲ್ಲಿ ಕೆಲಸ ಆಗುವ ಬಗ್ಗೆ ಪರಿಶೀಲಿಸಲಾಗುತ್ತದೆ. ಹೀಗಿರುವಾಗ ಈ ಪ್ರಕರಣಕ್ಕೆ ಸಂಬಂಧಿಸಿದಂತೆ 110 ಗೇಟ್ ಗಳು ಕಳ್ಳತನವಾದ ಬಗ್ಗೆ ಸದ್ರಿ ಸಿಸಿ ಕ್ಯಾಮೇರಾದಲ್ಲಿ ಸೆರೆ ಹಿಡಿಯಲಾಗುತ್ತದೆ ಎಂದರೆ ಇರಬಹುದು. ಹಾಗೇಯೇ ನಾನು ಕೆಲಸವನ್ನು ನಿರ್ವಹಿಸಿದ ಬಗ್ಗೆ ಕೂಡಾ ಸೆರೆ ಹಿಡಿಯಲಾಗಿರಬಹುದು.

ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದತಹ ಘಟನೆ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ಪುಸಭೆಯವರ ನಿರ್ಲಕ್ಷವನ್ನು ಮುಚ್ಚಿ ಹಾಕಲು ಈ ಪ್ರಕರಣದ ಕಳುವನ್ನು ಕಟ್ಟು ಕತೆಯಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ